## ಅಧ್ಯಾಯ – 2

# ವಸಾಹತು ಆಳ್ವಿಕೆಯಲ್ಲಿ ಕನ್ನಡ ಮಾತನಾಡುವ ಪ್ರದೇಶಗಳು

*ಈ ಅಧ್ಯಾಯದಲ್ಲಿ ಕೆಳಗಿನ ಅಂಶಗಳನ್ನು ತಿಳಿಯುತ್ತೇವೆ.*

- *ವಸಾಹತು ಆಳ್ವಿಕೆಯಲ್ಲಿ ಕನ್ನಡ ಮಾತನಾಡುವ ಪ್ರದೇಶಗಳ ಹಂಚಿಕೆ.*
- *ವಸಾಹತು ಆಳ್ವಿಕೆಯ ವಿರುದ್ಧ ಮೈಸೂರು ಪ್ರಾಂತ್ಯದ ಪ್ರತಿಭಟನೆ.*
- *ವಸಾಹತು ವಿರೋಧಿಸಿ ಹೈದರಾಬಾದ್–ಕರ್ನಾಟಕ ಭಾಗದ ಪ್ರತಿಭಟನೆ.*
- *ಮದ್ರಾಸ್ – ಕರ್ನಾಟಕ ಭಾಗದ ಪ್ರತಿಭಟನೆ.*
- *ಮುಂಬೈ – ಕರ್ನಾಟಕ ಭಾಗದ ಪ್ರತಿಭಟನೆ.*
- *ಕೊಡಗು ಭಾಗದ ಪ್ರತಿಭಟನೆ.*

ಮೊಘಲ್ ಸಾಮ್ರಾಜ್ಯದ ಪತನದ ನಂತರ 18ನೆಯ ಶತಮಾನದಲ್ಲಿ ಅಸ್ತಿತ್ವಕ್ಕೆ ಬಂದ ಸಣ್ಣ ಸಣ್ಣ ಪ್ರಾದೇಶಿಕ ಶಕ್ತಿಗಳಲ್ಲಿ ಮೈಸೂರು, ಮರಾಠರು, ಹೈದರಾಬಾದ್‌ನ ನಿಜಾಮರು ಮತ್ತು ಕರ್ನಾಟಿಕ್‌ನ ನವಾಬರು ದಕ್ಷಿಣದಲ್ಲಿ ಪ್ರಮುಖರು. ಇದೇ ಸಂದರ್ಭದಲ್ಲಿ ಭಾರತವನ್ನು ಪ್ರವೇಶಿಸಿದ ಯುರೋಪಿಯನ್ ವಸಾಹತುಶಾಹಿ ಶಕ್ತಿಗಳು ಈ ದೇಶೀಯ ಶಕ್ತಿಗಳ ವಿರುದ್ಧ ಪ್ರಾಬಲ್ಯಕ್ಕಾಗಿ ಕಾದಾಡಬೇಕಾಯಿತು. ಇದರ ನಡುವೆ ದೇಶೀಯ ಶಕ್ತಿಗಳು ಪರಮಾಧಿಕಾರಕ್ಕಾಗಿ ತಮ್ಮ ತಮ್ಮ ನಡುವೆಯೂ ಸಹ ಹೋರಾಟ ನಡೆಸಿದ ಕಾಲವದು. ಈ ಸಂದರ್ಭದಲ್ಲಿ ಕನ್ನಡ ಮಾತನಾಡುವ ಪ್ರದೇಶಗಳು ಬೇರೆ ಬೇರೆ ಪ್ರಾದೇಶಿಕ ಶಕ್ತಿಗಳ ಹಿಡಿತಕ್ಕೆ ಒಳಗಾದವು. ಕೆಲವು ಪ್ರದೇಶಗಳು ಮರಾಠರ ಆಳ್ವಿಕೆಗೆ ಒಳಗಾದರೆ ಇನ್ನು ಕೆಲವು ಹೈದರಾಬಾದಿನ ನಿಜಾಮ ಮತ್ತು ಕರ್ನಾಟಿಕ್‌ನ ನವಾಬನ ಆಳ್ವಿಕೆಗೆ ಒಳಗಾದವು. ಕಾಲಾನುಕ್ರಮೇಣ ಇಂಗ್ಲಿಷರು ಈ ದೇಶೀಯ ಸಂಸ್ಥಾನಗಳ ಮೇಲೆ ಹಿಡಿತವನ್ನು ಸಾಧಿಸಿದರು. ಕನ್ನಡ ಮಾತನಾಡುವ ಕೆಲವು ಪ್ರದೇಶಗಳು ಇಂಗ್ಲಿಷರ ಮುಂಬೈ ಪ್ರೆಸಿಡೆನ್ಸಿಗೆ ಒಳಪಟ್ಟರೆ, ಇನ್ನು ಕೆಲವು ಮದ್ರಾಸ್ ಪ್ರೆಸಿಡೆನ್ಸಿ ಹಾಗೂ ಹೈದರಾಬಾದಿನ ನಿಜಾಮನ ಆಳ್ವಿಕೆಗೆ ಒಳಪಟ್ಟವು. ಸ್ವತಂತ್ರ ಸಂಸ್ಥಾನವಾಗಿದ್ದ ಕೊಡಗು ರಾಜ್ಯವು ಇದೇ ಹೊತ್ತಿಗೆ ಹಾಲೇರಿ ಅರಸರ ಆಳ್ವಿಕೆಗೆ ಒಳಪಟ್ಟಿತ್ತು. ಹೀಗೆ ಕನ್ನಡ ಮಾತನಾಡುವ ಅನೇಕ ಪ್ರದೇಶಗಳು ದೇಶೀಯ ಸಂಸ್ಥಾನಗಳ ಹಿಡಿತದಿಂದ ಜಾರಿ ಬ್ರಿಟಿಷರ ಆಳ್ವಿಕೆಗೆ ಒಳಪಟ್ಟವು.

## ಮೈಸೂರು

18ನೆಯ ಶತಮಾನದ ಉತ್ತರಾರ್ಧದಲ್ಲಿ ಮೈಸೂರು ರಾಜ್ಯದ ಸೈನ್ಯಾಧಿಕಾರಿ ಹೈದರಾಲಿಯು ಪ್ರವರ್ಧಮಾನಕ್ಕೆ ಬಂದದ್ದು ಮರಾಠರಿಗೆ, ಕರ್ನಾಟಿಕ್ ನವಾಬನಿಗೆ ಹಾಗೂ ಹೈದರಾಬಾದಿನ ನಿಜಾಮನಿಗೆ ಸವಾಲಾಗಿ ಪರಿಣಮಿಸಿತು. ಮರಾಠರು ಹಾಗೂ ನಿಜಾಮನು ಬ್ರಿಟಿಷರೊಂದಿಗೆ ಸೇರಿ, ಮೈಸೂರಿನ ವಿರುದ್ಧ ಹೋರಾಟ ನಡೆಸಿದರು. ನಂತರದ ಬೆಳವಣಿಗೆಯಲ್ಲಿ ನಿಜಾಮನು ಬ್ರಿಟಿಷರೊಂದಿಗೆ ಸೇರಿ ಮರಾಠರನ್ನು ವಿರೋಧಿಸಿದನು. ಹೀಗೆ ಸ್ಥಳೀಯ ರಾಜರುಗಳ ನಡುವೆ ಇದ್ದ ಹಗೆತನವನ್ನು ಬಳಸಿಕೊಂಡು ಬ್ರಿಟಿಷರು ಇವರುಗಳ ವಿರುದ್ಧ ಹಂತಹಂತವಾಗಿ ಜಯಗಳಿಸಿದರು.

1767ರಲ್ಲಿ ಮರಾಠರು ಹಾಗೂ ಹೈದರಾಬಾದಿನ ನಿಜಾಮನೊಂದಿಗೆ ಬ್ರಿಟಿಷರು ಸೇರಿ ಮೈಸೂರಿನ ಹೈದರಾಲಿಯ ಮೇಲೆ ಆಕ್ರಮಣ ನಡೆಸಿದರು. ಆದರೆ ಹೈದರಾಲಿಯು ಚಾಣಾಕ್ಷತನದಿಂದ ಮರಾಠರನ್ನು ಹಾಗೂ ಹೈದರಾಬಾದಿನ ನಿಜಾಮನನ್ನು ತನ್ನ ಕಡೆಗೆ ಒಲಿಸಿಕೊಳ್ಳುವಲ್ಲಿ ಸಫಲನಾದನು. ನಂತರ

KTBS Not to be republished

ಹೈದರಾಲಿಯು ಬ್ರಿಟಿಷರನ್ನು ಎದುರಿಸಿ ಮುಂದೆ ಮದ್ರಾಸಿನವರೆಗೂ ತಲುಪಿದನು. ಇದರಿಂದ ಬ್ರಿಟಿಷರು 'ಮದ್ರಾಸ್ ಶಾಂತಿ ಒಪ್ಪಂದ'ಕ್ಕೆ ಸಹಿ ಹಾಕುವುದು ಅನಿವಾರ್ಯವಾಯಿತು. ಈ ಒಪ್ಪಂದದೊಂದಿಗೆ ಮೊದಲನೆ ಆಂಗ್ಲೋ–ಮೈಸೂರು ಯುದ್ಧವು ಕೊನೆಗೊಂಡಿತು. ಈ ಒಪ್ಪಂದವು ಮೂರನೆ ಶಕ್ತಿಯಿಂದ ಆಕ್ರಮಣವಾದಾಗ ಪರಸ್ಪರ ಸಹಾಯ ಮಾಡುವ ಬದ್ಧತೆಗೆ ಒಳಪಟ್ಟಿತ್ತು. ಆದರೆ ಮರಾಠರು ಮೈಸೂರಿನ ಮೇಲೆ ದಾಳಿ ಮಾಡಿದಾಗ ಇಂಗ್ಲಿಷರು ತಾವು ಮಾಡಿಕೊಂಡಿದ್ದ ಒಪ್ಪಂದದಂತೆ ಹೈದರಾಲಿಯ ಸಹಾಯಕ್ಕೆ ಬರಲಿಲ್ಲ. ಇದರಿಂದ ಬ್ರಿಟಿಷರು ನಂಬಿಕೆಗೆ ಅರ್ಹರಲ್ಲವೆಂಬ ತೀರ್ಮಾನಕ್ಕೆ ಹೈದರಾಲಿಯು ಬರಬೇಕಾಯಿತು.

**ನಿಮಗಿದು ತಿಳಿದಿರಲಿ**

***ಹೈದರಾಲಿ :***

*ವಿಜಯನಗರ ರಾಜ್ಯದ ಅಸ್ತಂಗತದ ನಂತರದಿಂದಲೂ ಮೈಸೂರು ಸಂಸ್ಥಾನವು ತನ್ನ ಸ್ವಾತಂತ್ರ್ಯವನ್ನು ಉಳಿಸಿ ಕೊಂಡುಬಂದಿತ್ತು. ನೆಪಮಾತ್ರಕಷ್ಟೆ ಅದು ಮೊಘಲ್ ಸಾಮ್ರಾಜ್ಯದ ಅಧೀನದಲ್ಲಿತ್ತು. ನಂಜರಾಜ (ಸರ್ವಾಧಿಕಾರಿ) ಮತ್ತು ದೇವರಾಜ (ದಳವಾಯಿ) ಎಂಬ ಇಬ್ಬರು ಮಂತ್ರಿಗಳು ಅಧಿಕಾರವನ್ನೆಲ್ಲ ಕಸಿದುಕೊಂಡು ಚಿಕ್ಕಕೃಷ್ಣರಾಜರನ್ನು ನಗಣ್ಯರನ್ನಾಗಿಸಿದ್ದರು. ಹೈದಾರಾಲಿಯು ಇಂತಹ ಸಂದರ್ಭದಲ್ಲಿ ಒಬ್ಬ ಸಾಧಾರಣ ಅಧಿಕಾರಿಯಾಗಿ ಮೈಸೂರಿನ ಸೇನೆಯಲ್ಲಿ ತನ್ನ ಬದುಕನ್ನು ಪ್ರಾರಂಭಿಸಿದನು. ಹನ್ನೆರಡು ವರ್ಷಕ್ಕೂ ಹೆಚ್ಚು ಕಾಲ ಮೈಸೂರು , ಯುದ್ಧಗಳಲ್ಲಿ ಮುಳುಗಿ ಹೋಗಿದ್ದಾಗ ಆ ಅಪರೂಪದ ಅವಕಾಶವನ್ನು ಹೈದರನು ಪಡೆದುಕೊಂಡನು. ಈ ಸದಾವಕಾಶವನ್ನು ಉಪಯೋಗಿಸಿಕೊಂಡು ಕ್ರಮೇಣವಾಗಿ ಸೈನ್ಯದಲ್ಲಿ ಮೇಲುದರ್ಜೆಗೆ ಏರಿದನು. ನಂಜರಾಜನನ್ನು ಪದಚ್ಯುತಗೊಳಿಸಿ 1761ರಲ್ಲಿ ತಾನೇ ಮೈಸೂರಿನ ಮೇಲೆ ಹಿಡಿತ ಸಾಧಿಸಿಕೊಂಡನು. ದಂಗೆಯೆದ್ದ ಪಾಳೆಗಾರರನ್ನು ಹದ್ದುಬಸ್ತಿನಲ್ಲಿಟ್ಟು ಸುತ್ತಲಿನ ಪ್ರದೇಶಗಳಾದ ಬಿದನೂರು, ಸುಂಡ, ಸೆರಾ, ಕೆನರಾ ಮತ್ತು ಮಲಬಾರನ್ನು ವಶಪಡಿಸಿಕೊಂಡನು. ಈತ ಅನಕ್ಷರಸ್ತನಾಗಿದ್ದರೂ ಉತ್ತಮ ಆಡಳಿತಗಾರನಾಗಿದ್ದನು. ಈತನು ಮೈಸೂರಿನಲ್ಲಿ ಮೊಘಲರ ಕಂದಾಯ ಮತ್ತು ಆಡಳಿತವ್ಯವಸ್ಥೆಯನ್ನು ಜಾರಿಗೆ ತಂದನು. ಭಾರತದಲ್ಲಿಯೇ ಮೈಸೂರನ್ನು ಒಂದು ಪ್ರಬಲರಾಜ್ಯವಾನ್ನಾಗಿಸಿದ ಕೀರ್ತಿ ಇವನಿಗೆ ಸಲ್ಲುತ್ತದೆ. ಈತನು ಧರ್ಮ ಸಹಿಷ್ಣತೆಯನ್ನು ಅನುಸರಿಸುತ್ತಿದ್ದನಲ್ಲದೆ ಮೊದಲ ದಿವಾನರಾದ ಪೂರ್ಣಯ್ಯ ಮತ್ತು ಇನ್ನಿತರ ಅಧಿಕಾರಿಗಳು ಹಿಂದೂಗಳಾಗಿದದ್ದು ವಿಶೇಷ.*

*ಮೈಸೂರಿನಲ್ಲಿ ಅಧಿಕಾರ ಪಡೆದ ಈತ ಪ್ರಾರಂಭದಿಂದಲೂ ಮರಾಠರು, ನಿಜಾಮರು ಮತ್ತು ಬ್ರಿಟಿಷರೊಂದಿಗೆ ನಿರಂತರ ಕದನದಲ್ಲಿದ್ದನು. ಬ್ರಿಟಿಷರ ಶಕ್ತಿಯನ್ನು ಅಡಗಿಸಿ 1769ರಲ್ಲಿ ಮದ್ರಾಸಿನವರೆಗೂ ತಲುಪಿದನು. ಎರಡನೆಯ ಆಂಗ್ಲೋ ಮೈಸೂರು ಯುದ್ಧದ ಸಂದರ್ಭದಲ್ಲಿ ಈತನು ಮರಣವನ್ನಪ್ಪಿದನು. ಇವನ ನಂತರ ಈತನ ಮಗನಾದ ಟಿಪ್ಪು ಮೈಸೂರಿನ ಸುಲ್ತಾನನಾಗಿ ಹೈದರನಂತೆಯೇ ಬ್ರಿಟಿಷರೊಂದಿಗೆ ಕಾದಾಡುತ್ತ 1799ರಲ್ಲಿ ಟಿಪ್ಪುವು ಕೊನೆಯುಸಿರುಳೆದನು.*

ಮಾಹೆಯು ಫ್ರೆಂಚರ ವಸಾಹತಾಗಿದ್ದು, ಹೈದರಾಲಿಯ ನಿಯಂತ್ರಣಕ್ಕೊಳಪಟ್ಟಿತ್ತು. ಇಂಗ್ಲಿಷರು ಮಾಹೆಯನ್ನು ವಶಪಡಿಸಿಕೊಂಡದ್ದು ಎರಡನೆಯ ಮೈಸೂರು ಯುದ್ಧಕ್ಕೆ ಕಾರಣವಾಯಿತು. ಈ ಸಂದರ್ಭದಲ್ಲಿ ಮರಾಠರು ಹಾಗೂ ನಿಜಾಮನು ಇಂಗ್ಲಿಷರೊಂದಿಗೆ ಕೈಜೋಡಿಸಿದರು. 1781ರಲ್ಲಿ ಐರ್‌ಕೂಟನ ನೇತೃತ್ವದ ಇಂಗ್ಲಿಷ್ ಸೈನ್ಯವು ಹೈದರಾಲಿಯನ್ನು ಯುದ್ಧದಲ್ಲಿ ಸೋಲಿಸಿತು. ಹೈದರಾಲಿಯು ಮರಣ ಹೊಂದಿದ ಮೇಲೆ ಯುದ್ಧವನ್ನು ಅವನ ಮಗನಾದ ಟಿಪ್ಪುಸುಲ್ತಾನನು ಮುಂದುವರೆಸಿದನು. ಈ ಯುದ್ಧವು 'ಮಂಗಳೂರಿನ ಶಾಂತಿ ಒಪ್ಪಂದ'ದೊಂದಿಗೆ 1784ರಲ್ಲಿ ಕೊನೆಗೊಂಡಿತು.

ಇಂಗ್ಲಿಷರು ಟಿಪ್ಪುವನ್ನು ದಕ್ಷಿಣಭಾರತದ ಪ್ರಬಲ ವೈರಿ ಎಂದು ಪರಿಗಣಿಸಿದ್ದರು. ಟಿಪ್ಪು ಇಂಗ್ಲಿಷರ ಸ್ನೇಹಿತನಾದ ತಿರುವಾಂಕೂರಿನ ಮೇಲೆ ದಾಳಿ ನಡೆಸಿದಾಗ ಇಂಗ್ಲಿಷರೊಂದಿಗಿನ ಸಂಘರ್ಷವು ಮತ್ತೆ ಆರಂಭವಾಯಿತು. ಇದೇ ಮೂರನೆ ಮೈಸೂರು ಯುದ್ಧ. 1790ರಲ್ಲಿ ಆರಂಭವಾದ ಈ ಯುದ್ಧವು

ಎರಡು ವರ್ಷಗಳ ನಂತರ 1792ರಲ್ಲಿ 'ಶ್ರೀರಂಗಪಟ್ಟಣ ಒಪ್ಪಂದ'ದೊಂದಿಗೆ ಕೊನೆಗೊಂಡಿತು. ಈ ಯುದ್ಧದಲ್ಲಿ ಟಿಪ್ಪು ತೀವ್ರವಾದ ಸೋಲನ್ನು ಅನುಭವಿಸಿದನು. ಪರಿಣಾಮವಾಗಿ ಅವನು ತನ್ನ ಅರ್ಧ ರಾಜ್ಯವನ್ನು ಬ್ರಿಟಿಷರಿಗೆ ಕೊಡುವುದರ ಜೊತೆಗೆ 330 ಲಕ್ಷ ರೂಪಾಯಿಗಳನ್ನು ಯುದ್ಧ ಪರಿಹಾರ ಧನವಾಗಿ ಬ್ರಿಟಿಷರಿಗೆ ನೀಡಬೇಕಾಯಿತು. ಅದನ್ನು ನೀಡುವವರೆಗೂ ಟಿಪ್ಪುವಿನ ಇಬ್ಬರು ಮಕ್ಕಳನ್ನು ಇಂಗ್ಲಿಷರು ಒತ್ತೆಯಾಳುಗಳಾಗಿ ಇಟ್ಟುಕೊಂಡರು. ಮೈಸೂರಿನ ಅಧೀನದಲ್ಲಿದ್ದ ತಮಿಳುನಾಡಿನ ಕೆಲವು ಪ್ರದೇಶಗಳು ಮತ್ತು ಮಲಬಾರ್ ಬ್ರಿಟಿಷರ ವಶವಾಯಿತು. ತುಂಗಭದ್ರಾವರೆಗಿನ ಪ್ರದೇಶವು ಮರಾಠರಿಗೆ ದೊರೆಯಿತು. ಬಳ್ಳಾರಿ, ಕಡಪ, ತುಂಗಭದ್ರಾ ದೋ-ಅಬ್ ಪ್ರದೇಶವು ನಿಜಾಮನಿಗೆ ದೊರೆಯಿತು.



ಟಿಪ್ಪುಸುಲ್ತಾನ್

## ಟಿಪ್ಪು ನಂತರದ ಮೈಸೂರು




1798ರಲ್ಲಿ ಭಾರತಕ್ಕೆ ಗವರ್ನರ್ ಜನರಲ್ ಆಗಿ ಆಗಮಿಸಿದ ಲಾರ್ಡ್ ವೆಲೆಸ್ಲಿಯು ಸಹಾಯಕ ಸೈನ್ಯ ಪದ್ಧತಿಯನ್ನು ಟಿಪ್ಪುವಿನ ಮೇಲೆ ಹೇರಲು ಯತ್ನಿಸಿದನು. ಬ್ರಿಟಿಷರ ಬದ್ಧ ವೈರಿಯಾಗಿದ್ದ ಟಿಪ್ಪು ಸಹಾಯಕ ಸೈನ್ಯಪದ್ಧತಿಯನ್ನು ತಿರಸ್ಕರಿಸಿ ಯುದ್ಧ ತಯಾರಿಯನ್ನು ನಡೆಸಿದನು. ಟಿಪ್ಪುವು ಬ್ರಿಟಿಷರನ್ನು ಎದುರಿಸಲು ಮತ್ತು ತನ್ನ ರಾಜಧಾನಿಯ ರಕ್ಷಣೆಗಾಗಿ ಕ್ರಮಕೈಗೊಂಡನು. ಫ್ರೆಂಚರಿಂದ ತನ್ನ ಸೈನ್ಯಕ್ಕೆ ತರಬೇತಿ ಕೊಡಿಸಿದನು. ಟಿಪ್ಪುವು ಫ್ರಾನ್ಸ್, ಟರ್ಕಿ ಮುಂತಾದ ದೇಶಗಳನ್ನು ಸಂಪರ್ಕಿಸಿ ಸಹಾಯವನ್ನು ಪಡೆಯಲು ಯತ್ನಿಸಿದನು. ಈ ಸಮಯದಲ್ಲಿ ಬ್ರಿಟಿಷರ ಗವರ್ನರ್ ಜನರಲ್ ಲಾರ್ಡ್ ವೆಲೆಸ್ಲಿಯು ಟಿಪ್ಪುವಿನ ವಿರುದ್ಧ ಯುದ್ಧ ಸಾರಿದನು. ಟಿಪ್ಪುವು ಏಕಾಂಗಿಯಾಗಿ ಬ್ರಿಟಿಷರನ್ನು ಎದುರಿಸಲು ನಿರ್ಧರಿಸಿದನು. 1799ರಲ್ಲಿ ಬ್ರಿಟಿಷರು ಟಿಪ್ಪುವಿನ ರಾಜಧಾನಿಯಾಗಿದ್ದ ಶ್ರೀರಂಗಪಟ್ಟಣವನ್ನು ನಾಲ್ಕೂ ಕಡೆಯಿಂದಲೂ ಮುತ್ತಿಗೆ ಹಾಕಿದರು. ಟಿಪ್ಪುವು ವೀರಾವೇಶದಿಂದ ಹೋರಾಡಿ ರಣರಂಗದಲ್ಲಿಯೇ ಸಾವನ್ನಪ್ಪಿದನು.

KTBS Not to be republished

ಇದನ್ನು ನಾಲ್ಕನೇ ಆಂಗ್ಲೋ–ಮೈಸೂರು ಯುದ್ಧ ಎಂದು ಕರೆಯಲಾಗಿದೆ. ಇದರ ಪರಿಣಾಮವಾಗಿ ಮೈಸೂರು ರಾಜ್ಯದ ಪ್ರದೇಶವನ್ನು ಬ್ರಿಟಿಷರು ಮತ್ತು ನಿಜಾಮನು ಹಂಚಿಕೊಂಡು ಹಳೇ ಮೈಸೂರಿನ ಭಾಗವನ್ನು ಮುಮ್ಮಡಿ ಕೃಷ್ಣರಾಜ ಒಡೆಯರಿಗೆ ಒಪ್ಪಿಸಲಾಯಿತು. ಟಿಪ್ಪುವಿನ ಹಿಡಿತದಲ್ಲಿದ್ದ ಕೊಡಗಿನ ಅನೇಕ ಪ್ರದೇಶಗಳನ್ನು ಕೊಡಗಿನ ರಾಜರಿಗೆ ನೀಡಲಾಯಿತು.

**ಚಟುವಟಿಕೆ :**

*ಪ್ರವಾಸ ಕೈಗೊಂಡ ಸಮಯದಲ್ಲಿ ಮೈಸೂರು ಸಂಸ್ಥಾನದಲ್ಲಿನ ಐತಿಹಾಸಿಕ ಸ್ಮಾರಕಗಳನ್ನು ವೀಕ್ಷಿಸಿ ವರದಿ ಸಿದ್ದಪಡಿಸಿ.*

ಮೈಸೂರಿನಲ್ಲಿ ಒಡೆಯರ ಆಳ್ವಿಕೆ ಕರ್ನಾಟಕ ಇತಿಹಾಸದ ಒಂದು ಮುಖ್ಯ ಅಧ್ಯಾಯ. ಯದುರಾಯ ಮತ್ತು ಕೃಷ್ಣರಾಯರಿಂದ ಪ್ರಾರಂಭವಾದ ಇವರ ಆಳ್ವಿಕೆ 1947ರವರೆಗೂ ನಡೆಯಿತು. 17ನೆಯ ಶತಮಾನದ ಆರಂಭದಲ್ಲಿ ಆಳಿದ ರಾಜ ಒಡೆಯರು ವಿಜಯನಗರದ ಪ್ರತಿನಿಧಿ ಶ್ರೀರಂಗರಾಯನನ್ನು ಸೋಲಿಸಿ ಶ್ರೀರಂಗಪಟ್ಟಣವನ್ನು ವಶಪಡಿಸಿಕೊಂಡು ಅದನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಳತೊಡಗಿದರು. ಆನಂತರದಲ್ಲಿ ಒಡೆಯರು ಬಲಿಷ್ಠರಾದರು. ಆರಂಭಿಕ ಒಡೆಯರಲ್ಲಿ ಕಂಠೀರವ ನರಸರಾಜ ಮತ್ತು ಚಿಕ್ಕದೇವರಾಜ ಒಡೆಯರು ಪ್ರಮುಖರು. ಇವರ ಆಳ್ವಿಕೆಯಲ್ಲಿ ರಾಜ್ಯವು ವಿಸ್ತಾರಗೊಂಡು ಸರ್ವಾಂಗೀಣ ಅಭಿವೃದ್ಧಿಯನ್ನು ಕಂಡಿತು. ಮುಂದೆ ಮುಮ್ಮಡಿ ಕೃಷ್ಣರಾಜ ಒಡೆಯರು ಆಳಿದರು. ನಂತರದ ಒಡೆಯರಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಮೈಸೂರು ರಾಜ್ಯವು ರಾಮರಾಜ್ಯ ಎಂಬ ಕೀರ್ತಿಗೆ ಪಾತ್ರವಾಯಿತು. ಒಡೆಯರ ಆಳ್ವಿಕೆಯಲ್ಲಿ ಮೈಸೂರು ರಾಜ್ಯವು ಭಾರತದ ರಾಜಸಂಸ್ಥಾನಗಳಲ್ಲಿ ಅತ್ಯಂತ ಮುಂದುವರಿದ ರಾಜ್ಯವೆಂಬ ಹೆಸರು ಪಡೆಯಿತು. ಜಯಚಾಮರಾಜ ಒಡೆಯರು ಈ ರಾಜ್ಯದ ಕೊನೆಯ ಅರಸರು.

### ಹೈದರಾಬಾದ್ ಕರ್ನಾಟಕ

ಹೈದರಾಬಾದಿನ ನಿಜಾಮನ ನೇರ ಆಳ್ವಿಕೆಗೆ ಒಳಪಟ್ಟಿದ್ದ ಇಂದಿನ ಬೀದರ್, ಗುಲ್ಬರ್ಗಾ, ಯಾದಗಿರಿ, ಕೊಪ್ಪಳ, ಬಳ್ಳಾರಿ ಮತ್ತು ರಾಯಚೂರು ಭಾಗಗಳನ್ನು ಹೈದರಾಬಾದ್ ಕರ್ನಾಟಕ ಪ್ರದೇಶಗಳೆಂದು ಗುರುತಿಸಲಾಗಿದೆ.

ಈ ಹಿಂದೆ ಬೀದರ್ ಮೊಘಲ್ ಸಾಮ್ರಾಟ ಔರಂಗಜೇಬನ ದಖನ್ ಪ್ರಾಂತ್ಯದ ಭಾಗವಾಗಿತ್ತು. ಔರಂಗಜೇಬನ ಮರಣದ ನಂತರ ಇಡೀ ದಖನ್ ಪ್ರಾಂತ್ಯವು ಹೈದರಾಬಾದಿನ ನಿಜಾಮನ ಆಳ್ವಿಕೆಗೆ ಒಳಪಟ್ಟಿತು. ಹಿಂದೆ ಹೈದರಾಬಾದಿನ ನಿಜಾಮನು ಮೊಘಲ್ ಚಕ್ರವರ್ತಿಯ ಪ್ರಾಂತೀಯ ಅಧಿಕಾರಿಯಾಗಿದ್ದನು. ಔರಂಗಜೇಬನ ನಂತರ ಬಂದ ಮೊಘಲ್ ಸಾಮ್ರಾಟರು ದುರ್ಬಲರಾದಾಗ

**ನಿಮಗಿದು ತಿಳಿದಿರಲಿ :**

***ಹೈದರಾಬಾದ್ ಕರ್ನಾಟಕ ಭಾಗಕ್ಕೆ ವಿಶೇಷ ಸ್ಥಾನಮಾನ.***

*ಹೈದರಾಬಾದ್ ಕರ್ನಾಟಕ ಪ್ರದೇಶಕ್ಕೆ ಸಂಬಂಧಿಸಿದಂತೆ ಸಂವಿಧಾನದ 371 ಜೆ ವಿಧಿಯಡಿಯಲ್ಲಿ ಇತ್ತೀಚೆಗೆ ವಿಶೇಷ ಸ್ಥಾನಮಾನವನ್ನು ನೀಡಲಾಗಿದೆ. ಇದರ ಅನ್ವಯ ಕರ್ನಾಟಕ ಸರ್ಕಾರವು ಹೈದರಾಬಾದ್ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯನ್ನು ರಚಿಸಿದೆ. ಇದರಡಿಯಲ್ಲಿ ಈ ಭಾಗಕ್ಕೆ ವಿಶೇಷವಾದ ಸೌಲಭ್ಯಗಳನ್ನು ನೀಡಲು ಸರ್ಕಾರವು ಕ್ರಮಕೈಗೊಂಡಿರುತ್ತದೆ. ಈ ಭಾಗದ ವಿದ್ಯಾರ್ಥಿಗಳಿಗೆ ರಾಜ್ಯದ ಎಲ್ಲ ಶಿಕ್ಷಣಸಂಸ್ಥೆಗಳಲ್ಲಿ ವಿದ್ಯಾಭ್ಯಾಸಕ್ಕಾಗಿ ನಿಗದಿತ ಪ್ರಮಾಣದ ಸೀಟುಗಳನ್ನು ಮೀಸಲಿಡಲಾಗಿದೆ. ರಾಜ್ಯಸರ್ಕಾರದ ನೇಮಕಾತಿಗಳಲ್ಲಿ ಈ ಪ್ರದೇಶದ ಜನರಿಗೆ ನಿಗದಿತಪ್ರಮಾಣದ ಮೀಸಲಾತಿಯನ್ನು ಕೂಡ ನಿಗದಿಪಡಿಸಲಾಗಿರುತ್ತದೆ. ಈ ಪ್ರದೇಶದ ಸರ್ವತೋಮುಖ ಅಭಿವೃದ್ಧಿಗೆ ವಿಶೇಷ ಆದ್ಯತೆ ನೀಡಲಾಗುತ್ತಿದೆ.*

ಹೈದರಾಬಾದಿನ ನಿಜಾಮನು ಸ್ವತಂತ್ರನಾದನು. ಆಗ ದಖನ್ ಪ್ರಾಂತ್ಯವೆಲ್ಲ ಅವನ ಕೈವಶವಾಯಿತು. ಇದರ ಪರಿಣಾಮವಾಗಿ ಕನ್ನಡ ಭಾಷಾ ಪ್ರದೇಶಗಳಾಗಿದ್ದ ಬೀದರ್, ಗುಲ್ಬರ್ಗಾ ಮತ್ತು ರಾಯಚೂರಿನ ಪ್ರದೇಶಗಳು ನಿಜಾಮನ ಆಳ್ವಿಕೆಗೆ ಒಳಪಟ್ಟವು.

**ಚಟುವಟಿಕೆ :**

*ಹೈದರಾಬಾದ್ ಕರ್ನಾಟಕ ಭಾಗಕ್ಕೆ ಸರ್ಕಾರವು ನೀಡುತ್ತಿರುವ ವಿಶೇಷ ಸ್ಥಾನಮಾನ, ಸೌಲಭ್ಯಗಳ ಬಗ್ಗೆ ಪತ್ರಿಕೆಗಳಲ್ಲಿ ಬರುವ ಮಾಹಿತಿಗಳನ್ನು ಸಂಗ್ರಹಿಸಿ.*

ಬ್ರಿಟಿಷರು ಜಾರಿಗೊಳಿಸಿದ 'ದತ್ತು ಮಕ್ಕಳಿಗೆ ಹಕ್ಕಿಲ್ಲ' ಎಂಬ ನಿಯಮವನ್ನು ದೇಶೀಯ ಸಂಸ್ಥಾನಗಳು ತೀವ್ರವಾಗಿ ಪ್ರತಿರೋಧಿಸಿದವು. ಕಿತ್ತೂರು ರಾಣಿ ಚೆನ್ನಮ್ಮ, ಸಂಗೊಳ್ಳಿರಾಯಣ್ಣ ಮತ್ತಿತರರು ಈ ಪ್ರತಿಭಟನೆಯ ನಾಯಕತ್ವವನ್ನು ವಹಿಸಿಕೊಂಡಿದ್ದರು. ಇದರ ಜೊತೆಜೊತೆಗೆ ಸೂಪ, ಸುರಪುರ, ನರಗುಂದ ಮತ್ತು ದಾಂಡೇಲಿಗಳಲ್ಲಿ ಇಂಗ್ಲಿಷರ ವಿರುದ್ಧ ಪ್ರತಿಭಟನೆಗಳು ನಡೆದವು. ಈ ಪ್ರತಿಭಟನೆಗಳ ನಾಯಕತ್ವವನ್ನು ಮುಂಡರಗಿ ಭೀಮರಾವ್, ಭಾಸ್ಕರ್‌ರಾವ್ ಭಾವೆ, ಹಲಗಲಿಯ ಬೇಡರು, ರಾಜ ವೆಂಕಟಪ್ಪ ನಾಯಕ ಮತ್ತಿತರರು ವಹಿಸಿಕೊಂಡಿದ್ದರು.

**ನಿಮಗಿದು ತಿಳಿದಿರಲಿ** **ಹಲಗಲಿ ಬೇಡರು**

*ಬಾಗಲಕೋಟೆ ಜಿಲ್ಲೆ ಮುದೋಳ ತಾಲ್ಲೂಕಿನಲ್ಲಿ ಹಲಗಲಿ ಎಂಬುದು ಒಂದು ಪುಟ್ಟಗ್ರಾಮ. ಹಿಂದೆ ಇದು ಮುದೋಳ ಸಂಸ್ಥಾನದ ಆಳ್ವಿಕೆಗೆ ಒಳಪಟ್ಟಿತು. 1857ರ ಬಂಡಾಯದ ಸಂದರ್ಭದಲ್ಲಿ ಇಂಗ್ಲಿಷರು ತಮ್ಮ ಆಳ್ವಿಕೆಯ ಪ್ರದೇಶದಲ್ಲಿ ಶಸ್ತ್ರಗಳ ಬಳಕೆಯನ್ನು ನಿರ್ಬಂಧಿಸಿ ಕಾನೂನೊಂದನ್ನು ತಂದರು. ಇದನ್ನು ಹಲಗಲಿಗೂ ಸಹ ಅನ್ವಯಿಸಲಾಯಿತು. ಹಲಗಲಿಯ ಬೇಡರು ತಲೆತಲಾಂತರಗಳಿಂದ ಬೇಟೆಯಾಡುವ ಉದ್ದೇಶಕ್ಕೆ ಮುಕ್ತವಾಗಿ ಬಳಸುತ್ತಿದ್ದ ಬಂದೂಕುಗಳನ್ನು ಇಂಗ್ಲಿಷರಿಗೆ ಒಪ್ಪಿಸಲು ಸಿದ್ಧರಿರಲಿಲ್ಲ. ಬೇಡರು ತಮ್ಮ ಪರಂಪರಾನುಗತವಾದ ಹಕ್ಕನ್ನು ಉಳಿಸಿಕೊಳ್ಳುವ ಉದ್ದೇಶದಿಂದ ಇಂಗ್ಲಿಷರ ವಿರುದ್ಧ ಸಿಡಿದೆದ್ದರು. ಈ ಹೋರಾಟದಲ್ಲಿ ಹಲಗಲಿಯ ಸುತ್ತಮುತ್ತಲಿನ ಪ್ರದೇಶಗಳಾದ ಮಂಟೂರು, ಬೋದಾನಿ, ಆಲಗುಂಡಿಯ ಬೇಡರು, ಹಲಗಲಿಯ ಬೇಡರೊಂದಿಗೆ ಸೇರಿಕೊಂಡರು. ಇವರ ಬಂಡಾಯವನ್ನು ಹತ್ತಿಕ್ಕಲು ನವೆಂಬರ್‌ನಲ್ಲಿ ಇಂಗ್ಲಿಷರ ಸೇನೆ ಹಲಗಲಿ ಗ್ರಾಮವನ್ನು ತಲುಪಿತು. ಬಂಡಾಯವೆದ್ದ ಬೇಡರನ್ನು ನಿಷ್ಕಾರುಣ್ಯವಾಗಿ, ಅತ್ಯಂತ ದಮನಕಾರಿಯಾಗಿ ಇಂಗ್ಲಿಷರು ಹತ್ತಿಕ್ಕಿದರು. ಬಂಡಾಯಗಾರರನ್ನು ಗಲ್ಲಿಗೇರಿಸುವುದರ ಮೂಲಕ ಈ ಬಂಡಾಯವು ಕೊನೆಗೊಂಡಿತು.*

**ಮದ್ರಾಸ್ – ಕರ್ನಾಟಕ**

ಕನ್ನಡ ಮಾತನಾಡುವ ಬಳ್ಳಾರಿ, ದಕ್ಷಿಣಕನ್ನಡ ಪ್ರದೇಶಗಳು 19ನೆಯ ಶತಮಾನದಲ್ಲಿ ಮದ್ರಾಸ್ ಪ್ರಾಂತ್ಯದ ಆಳ್ವಿಕೆಗೆ ಒಳಪಟ್ಟಿದ್ದವು.

ಇಕ್ಕೇರಿಯ ವೆಂಕಟಪ್ಪ ನಾಯಕನು 17ನೆಯ ಶತಮಾನದ ಪ್ರಾರಂಭದಲ್ಲಿ ದಕ್ಷಿಣ ಕನ್ನಡವನ್ನು ವಶಪಡಿಸಿಕೊಂಡನು. ತದನಂತರದಲ್ಲಿ ಈತನು ತನ್ನ ರಾಜಧಾನಿಯನ್ನು ಬಿದನೂರಿಗೆ ವರ್ಗಾಯಿಸಿದನು. 18ನೆಯ ಶತಮಾನದ ಮಧ್ಯಭಾಗದವರೆಗೂ ಈ ನಾಯಕನ ಅಧೀನದಲ್ಲಿದ್ದ ಕೆಳದಿ ದೊರೆಗಳ ಆಳ್ವಿಕೆ ಮುಂದುವರೆಯಿತು. ದಕ್ಷಿಣಕನ್ನಡದೊಂದಿಗೆ ಇಂಗ್ಲಿಷರ ಸಂಬಂಧವು 1737ರಲ್ಲಿ ಪ್ರಾರಂಭವಾಯಿತು. ಇವರು ಬಿದನೂರಿನ ರಾಜನಿಂದ ವ್ಯಾಪಾರಿ ಅನುಕೂಲವನ್ನು ಪಡೆದುದಲ್ಲದೆ, ಮೆಣಸು ಮತ್ತು ಏಲಕ್ಕಿಯ ವ್ಯಾಪಾರದಲ್ಲಿಯೂ ಏಕಸ್ವಾಮ್ಯತೆಯನ್ನು ಕೆಲವು ಪ್ರದೇಶಗಳಲ್ಲಿ ಪಡೆದುಕೊಂಡರು.

1763ರಲ್ಲಿ ಬಿದನೂರನ್ನು ವಶಪಡಿಸಿಕೊಂಡ ಹೈದರಾಲಿಯು ನಂತರ ಮಂಗಳೂರನ್ನು ವಶಪಡಿಸಿಕೊಂಡನು. ಈ ಪ್ರದೇಶವನ್ನು ಹೈದರಾಲಿಯು ನೌಕಾನೆಲೆಯಾಗಿಸಿಕೊಂಡನು. 1780ರಲ್ಲಿ ಇಂಗ್ಲಿಷರು ಹೈದರನೊಂದಿಗೆ ಯುದ್ಧ ಪ್ರಾರಂಭಿಸಿದಾಗ ಮುಂಬೈಯಿಯ ಸೇನಾಧಿಪತಿಯು ಕುಂದಾಪುರವನ್ನು ವಶಪಡಿಸಿಕೊಂಡನು. ಬಿದನೂರು ಬ್ರಿಟಿಷರ ಕೈವಶವಾದಾಗ ಟಿಪ್ಪುವಿನ ಸೈನ್ಯದ ಪ್ರವೇಶವಾಯಿತು. ಇದರ ಪರಿಣಾಮವಾಗಿ ಇಂಗ್ಲಿಷರು ಹಿಂದೆ ಸರಿಯಬೇಕಾಯಿತು. ಈ ಸಂದರ್ಭದಲ್ಲಿ ದಕ್ಷಿಣ ಕನ್ನಡದ ಅನೇಕ ಪ್ರದೇಶಗಳು ಕೊಡಗಿನ ದಂಗೆಯಿಂದಾಗಿ ತತ್ತರಿಸಿದವು. ಅದೇ ವರ್ಷ ಜರುಗಿದ ವಿಭಜನೆ ಒಪ್ಪಂದದ ಅನ್ವಯ ಮಂಗಳೂರು ಇಂಗ್ಲಿಷರ ಕೈವಶವಾಯಿತು. 1862ರಲ್ಲಿ ಕುಂದಾಪುರದ ಉತ್ತರಕ್ಕಿರುವ ಪ್ರದೇಶಗಳನ್ನು ಮುಂಬೈ ಪ್ರಾಂತ್ಯಕ್ಕೆ ವರ್ಗಾಯಿಸಲಾಯಿತು ಮತ್ತು ಉಳಿದ ಭಾಗಗಳಾದ ಬಳ್ಳಾರಿ, ದಕ್ಷಿಣ ಕನ್ನಡ ಮದ್ರಾಸಿನ ಆಳ್ವಿಕೆಗೆ ಒಳಪಟ್ಟಿತು.

## ಮುಂಬೈ ಕರ್ನಾಟಕ

ಬೆಳಗಾವಿ, ಬಿಜಾಪುರ, ಧಾರವಾಡ ಹಾಗೂ ಉತ್ತರಕನ್ನಡದ ಭಾಗಗಳು ಮುಂಬೈ ಪ್ರಾಂತ್ಯದ ಆಳ್ವಿಕೆಗೆ ಒಳಪಟ್ಟಿದ್ದವು.

ವಿಜಯನಗರ ರಾಜ್ಯದ ಪತನದ ನಂತರ ಕೆನರಾದ ಸ್ಥಳೀಯ ನಾಯಕರುಗಳು ಸ್ವತಂತ್ರರಾದರು. ತದನಂತರದಲ್ಲಿ ಬಿಜಾಪುರದ ಸುಲ್ತಾನರು ಸಹಜವಾಗಿ ಕೆನರಾ ಪ್ರದೇಶಗಳ ಮೇಲೆ ಅಧಿಕಾರವನ್ನು ಹೊಂದಿದರು. 1686ರಲ್ಲಿ ಬಿಜಾಪುರದ ಪತನದ ನಂತರ ಕೆನರಾ ಪ್ರದೇಶವು ಮೊಘಲರ ಅಧೀನಕ್ಕೆ ಒಳಪಟ್ಟಿತು. ನಂತರದಲ್ಲಿ ಅದು ಮರಾಠರ ಕೈವಶವಾಯಿತು. ಪರಿಣಾಮವಾಗಿ ಸೋಂದಾ ಮತ್ತು ಬಿದನೂರಿನ ನಾಯಕರು ಮೊಘಲರ ಅಧೀನರಾಗಿ ಕಪ್ಪಕಾಣಿಕೆಗಳನ್ನು ಅರ್ಪಿಸಿದರು. ಸುಮಾರು 1700ರ ನಂತರ ಮರಾಠರು ಕೆನರಾ ಪ್ರದೇಶವನ್ನು ವಶಪಡಿಸಿಕೊಂಡರು. 1763ರಲ್ಲಿ ಹೈದರಾಲಿಯು ಬಿದನೂರನ್ನು ವಶಪಡಿಸಿಕೊಂಡು ಅಪಾರ ಸಂಪತ್ತನ್ನು ಪಡೆದ ಸಂದರ್ಭದಲ್ಲಿ ಸೋಂದಾ ಮತ್ತು ಕರಾವಳಿಯನ್ನು ಸಹ ಅಧೀನಪಡಿಸಿಕೊಂಡನು. ಇದರಿಂದಾಗಿ ಮರಾಠರೊಂದಿಗೆ ವೈರತ್ವ ಕಟ್ಟಿಕೊಂಡನು. ಟಿಪ್ಪು ಇಂಗ್ಲಿಷರ ವಿರುದ್ಧ ಯುದ್ಧ ಮಾಡುತ್ತಿದ್ದ ಸಂದರ್ಭದಲ್ಲಿ ಹೊನ್ನಾವರವನ್ನು ಕಳೆದುಕೊಂಡನು. ಟಿಪ್ಪುವಿನ ಮರಣದ ನಂತರ ಸೋಂದಾವನ್ನು ಇಂಗ್ಲಿಷರು ಸ್ವಾಧೀನಪಡಿಸಿಕೊಂಡರು. ಮುಂಬೈ ಪ್ರದೇಶದೊಂದಿಗಿನ ಸಾಮಿಪ್ಯದಿಂದಾಗಿ ಸೋಂದಾವನ್ನು ಒಳಗೊಂಡಂತೆ ಕೆನರಾದ ಉತ್ತರ ಭಾಗವನ್ನು ಮುಂಬೈ ಪ್ರಾಂತ್ಯಕ್ಕೆ 1861ರಲ್ಲಿ ವರ್ಗಾಯಿಸಲಾಯಿತು. ಹೀಗಾಗಿ ಕೆನರಾದ ಭೂಭಾಗವು ಉತ್ತರಕನ್ನಡ ಮತ್ತು ದಕ್ಷಿಣಕನ್ನಡ ಪ್ರದೇಶಗಳಾಗಿ ವಿಭಜನೆಗೊಂಡವು.

ತಾಳಿಕೋಟೆ ಕದನದ ಮೊದಲೇ ಧಾರವಾಡದ ಭಾಗಗಳನ್ನು ಬಿಜಾಪುರದ ಸುಲ್ತಾನರು ವಶಪಡಿಸಿಕೊಂಡಿದ್ದರು. ಒಂದು ಕಾಲದಲ್ಲಿ ಧಾರವಾಡವು ಸಹ ಮೊಘಲರ ಅಧೀನಕ್ಕೆ ಒಳಪಟ್ಟಿತ್ತು. ನಂತರದ ಕಾಲಘಟ್ಟದಲ್ಲಿ ಹುಬ್ಬಳ್ಳಿ–ಧಾರವಾಡಗಳೆರಡು ಮರಾಠರ ಆಕ್ರಮಣಕ್ಕೆ ಒಳಗಾದವು. ಈ ಮುಂದಿನ ಬೆಳವಣಿಗೆಯಲ್ಲಿ ಹುಬ್ಬಳ್ಳಿ–ಧಾರವಾಡಗಳು ಹೈದರ್ ಮತ್ತು ಟಿಪ್ಪುವಿನ ವಶವಾದವು. ಆದರೆ ಮುಂದೆ ಮರಾಠರು ಈ ಪ್ರದೇಶಗಳನ್ನು ವಶಪಡಿಸಿಕೊಂಡು 1817ರವರೆಗೆ ತಮ್ಮ ಹಿಡಿತದಲ್ಲಿ ಇಟ್ಟುಕೊಂಡರು. ಅದೇ ವರ್ಷ ಈ ಪ್ರದೇಶಗಳು ಮರಾಠರ ಪತನದೊಂದಿಗೆ ಇಂಗ್ಲಿಷರ ವಶವಾದವು. 1836ರಲ್ಲಿ ಧಾರವಾಡದಿಂದ ಬೆಳಗಾವಿಯನ್ನು ಬೇರ್ಪಡಿಸಲಾಯಿತು. ನಂತರದ ಗಮನಾರ್ಹ ಘಟನೆಯೆಂದರೆ 1857–58ರಲ್ಲಿ ನರಗುಂದ ನಾಯಕರ ನೇತೃತ್ವದಲ್ಲಿ ಇಂಗ್ಲಿಷರ ವಿರುದ್ಧ ಪ್ರತಿಭಟನೆಯಾಯಿತು. ಇದನ್ನು ನರಗುಂದದ ಬಂಡಾಯ ಎಂದು ಕರೆಯುತ್ತಾರೆ. ಬಂಡಾಯದ ನಂತರ ನರಗುಂದವನ್ನು ಸಹ ಇಂಗ್ಲಿಷರು ಸ್ವಾಧೀನಪಡಿಸಿಕೊಂಡರು.

KTBS Not to be republished

**ಕೊಡಗು**

ಸುಮಾರು ಎಂಟು ಶತಮಾನಗಳ ಕಾಲ ಕೊಡಗನ್ನು ಆಳಿದ ಚೆಂಗಾಳ್ವರು 17ನೆಯ ಶತಮಾನದ ವೇಳೆಗೆ ತಮ್ಮ ಅಧಿಕಾರವನ್ನು ಕಳೆದುಕೊಂಡರು. ನಂತರದಲ್ಲಿ ಪ್ರವರ್ಧಮಾನಕ್ಕೆ ಬಂದವರು ಹಾಲೇರಿ ಅರಸರು. ಇವರು ಅನೇಕ ನಾಯಕರನ್ನು, ಪಾಳೇಗಾರರನ್ನು ಸೋಲಿಸಿ 18ನೆಯ ಶತಮಾನದ ವೇಳೆಗೆ ತಮ್ಮ ಅಧಿಪತ್ಯವನ್ನು ಸಾರಿದರು. ಈ ಶತಮಾನದ ಕೊನೆಯ ಭಾಗದಲ್ಲಿ ಕೊಡಗು ಹೈದರ್–ಟಿಪ್ಪುವಿನ ಆಳ್ವಿಕೆಗೆ ಒಳಪಟ್ಟಿತ್ತು. ರಾಜ್ಯ ಕಳೆದುಕೊಂಡ ಹಾಲೇರಿ ಅರಸರು ಬ್ರಿಟಿಷರನ್ನು ಆಶ್ರಯಿಸಿದ್ದರು. ಟಿಪ್ಪುವಿನ ಮರಣದ ನಂತರ ಹಾಲೇರಿ ಅರಸ ವೀರರಾಜನು ಕೊಡಗಿನ ಅರಸನಾದನು. ಇವನ ಮರಣದ ನಂತರ ವಾರಸುದಾರಳಾಗಿ ಈತನ ರಾಣಿ ರಾಜ್ಯವಾಳಿದಳು. ನಂತರದಲ್ಲಿ ಲಿಂಗರಾಜನು ರಾಜ್ಯವನ್ನು ಆಳಿದನು. ಲಿಂಗರಾಜನ ನಂತರ ಚಿಕ್ಕ ವೀರರಾಜ ಅಧಿಕಾರ ಸ್ವೀಕರಿಸಿದನು. ಈತನು ಪ್ರಾರಂಭದಲ್ಲಿ ಬ್ರಿಟಿಷರ ಸಹಾಯ ಪಡೆದನು. ಈತನು ಕ್ರೂರಿಯೂ, ಪ್ರಜಾಪೀಡಕನೂ ಆಗಿದ್ದರಿಂದ ಬ್ರಿಟಿಷರು ಇವನನ್ನು ಪದಚ್ಯುತಗೊಳಿಸಿ ಗಡೀಪಾರು ಮಾಡಲಾಯಿತು. ನಂತರದಲ್ಲಿ ಈತನು ತನ್ನ ಕುಟುಂಬದವರು ಬ್ರಿಟಿಷರ ಬಳಿ ಇಟ್ಟಿದ್ದ ಠೇವಣಿಯನ್ನು ಬಿಡಿಸಿಕೊಳ್ಳಲು ಇಂಗ್ಲೆಂಡಿಗೆ ತೆರಳಿ ಅಲ್ಲಿಯೇ ಅಸುನೀಗಿದನು. ಭಾರತದ ಹೊರಗೆ ಕಾಲಿಟ್ಟ ಪ್ರಥಮ ದೇಶೀ ದೊರೆ ಈತ ಎನ್ನುವುದು ಗಮನಾರ್ಹ ಅಂಶ.

ಯಾವುದೇ ರಕ್ತಪಾತವಿಲ್ಲದೆ ಕೊಡಗು ಬ್ರಿಟಿಷರ ಕೈಸೇರಿತು. ಕೊಡಗನ್ನು ವಿಂಗಡಿಸಿ ಕೆಳಕೊಡಗು ಪ್ರದೇಶವನ್ನು ಮದ್ರಾಸ್ ಪ್ರೆಸಿಡೆನ್ಸಿಗೆ ಸೇರಿಸಲಾಯಿತು. ಇದರಿಂದಾಗಿ ಆ ಭಾಗದ ರೈತರು ಹೆಚ್ಚಿನ ಕಂದಾಯದ ಶೋಷಣೆಗೆ ಸಿಲುಕಿದರು. ಲೇವಾದೇವಿಗಾರರಿಂದ ಸಾಲ ಪಡೆದು ಕಂದಾಯ ಪಾವತಿಸ ಬೇಕಾದ ಸ್ಥಿತಿಗೆ ತಲುಪಿದರು. ಕಂದಾಯ ಪಾವತಿ ಮಾಡದಿದ್ದರೆ ಸರ್ಕಾರವು ಹೂಡುತ್ತಿದ್ದ ನ್ಯಾಯಾಲಯದ ಖಟ್ಲೆಗಳಿಂದ, ವಕೀಲರಿಂದ ಶೋಷಣೆಗೆ ಒಳಗಾಗುತ್ತಿದ್ದರು. ಈ ಸಮಯದಲ್ಲಿ ಹಾಲೇರಿ ಅರಸರ ಹಿತಚಿಂತಕ ಸ್ವಾಮಿ ಅಪರಾಂಪರ ಎನ್ನುವ ಸಂನ್ಯಾಸಿಯು ಬ್ರಿಟಿಷರ ವಿರುದ್ಧ ರೈತರನ್ನು ಸಂಘಟಿಸಲು ಪ್ರಯತ್ನಿಸಿ ಬಂಧಿಸಲ್ಪಟ್ಟನು. ಇವನ ಅನುಯಾಯಿಯಾದ ಕಲ್ಯಾಣ ಸ್ವಾಮಿಯು ರೈತರನ್ನು ಸಂಘಟಿಸುವ ಕಾರ್ಯ ಮುಂದುವರಿಸಿ ಬ್ರಿಟಿಷರಿಗೆ ಸೆರೆಸಿಕ್ಕಿ ಗಲ್ಲಿಗೇರಿಸಲ್ಪಡುತ್ತಾನೆ. ಇದು ಸುದ್ದಿಯಾಗಲಿಲ್ಲ. ಆಗ ಪುಟ್ಟ ಬಸಪ್ಪ ಎಂಬ ನಾಯಕನನ್ನು ಕಲ್ಯಾಣ ಸ್ವಾಮಿ ಎಂದು ಬಿಂಬಿಸಿ ಹೋರಾಟಗಾರರು ಹೋರಾಟ ಮುಂದುವರಿಸಿದರು. ಅಮರಸುಳ್ಯದ ಪ್ರಭಾವಿ ರೈತ ನಾಯಕನಾದ ಕೆದಂಬಾಡಿ ರಾಮಗೌಡನು ಕಲ್ಯಾಣ ಸ್ವಾಮಿಗೆ ಆಶ್ರಯದಾತನಾಗಿ ಬ್ರಿಟಿಷರ ವಿರುದ್ಧ ಹೋರಾಟವನ್ನು ರೂಪಿಸಿದನು. 1837ರಲ್ಲಿ ಸುಳ್ಯದಿಂದ ರೈತರ ಸೈನ್ಯವು ಮಂಗಳೂರನ್ನು ಪ್ರವೇಶಿಸಿ ಅಲ್ಲಿ ವಿಜಯಧ್ವಜ ಹಾರಿಸಿತು. ಕಾಸರಗೋಡಿನಿಂದ ಮುಲ್ಕಿಯವರೆಗೆ, ಸುಳ್ಯದಿಂದ ಮಂಗಳೂರಿನವರೆಗಿನ ಪ್ರದೇಶದಲ್ಲಿ 13 ದಿನಗಳ ಕಾಲ ತಮ್ಮದೇ ಸರ್ಕಾರದ ಮೂಲಕ ರೈತ ಹೋರಾಟಗಾರರು ಆಳ್ವಿಕೆ ನಡೆಸಿದರು.

ಕೊಡಗಿನ ಒಳಗೂ ಕೂಡಾ ಗುಡ್ಡೇಮನೆ ಅಪ್ಪಯ್ಯಗೌಡನ ನೇತೃತ್ವದಲ್ಲಿ ಹೋರಾಟ ನಡೆಯಿತು. ಈ ಹೋರಾಟವನ್ನು ಬ್ರಿಟಿಷರು ತಮ್ಮ ಕೊಡಗು ದಿವಾನರ ಮೂಲಕ ಹತ್ತಿಕ್ಕಿದರು. ಮದ್ರಾಸಿನಿಂದ ಬಂದ ಸೈನ್ಯವು ಮಂಗಳೂರಿನಿಂದ ಹೋರಾಟಗಾರರನ್ನು ಹಿಮ್ಮೆಟ್ಟಿಸಿತು. ಇದನ್ನು ಬ್ರಿಟಿಷರು ದಂಗೆ ಎಂದು ಬಿಂಬಿಸಿದರು. ಹೋರಾಟದ ಪ್ರಮುಖರಲ್ಲಿ ಕೆಲವರನ್ನು ನೇಣುಹಾಕಲಾಯಿತು, ಮತ್ತೆ ಕೆಲವರನ್ನು ಬಂಧಿಸಿ ಗಡೀಪಾರು ಮಾಡಲಾಯಿತು. ಕೆಳಕೊಡಗು ಮತ್ತು ಕರಾವಳಿಯಲ್ಲಿನ ಈ ಹೋರಾಟವು 1857ರ ಸ್ವಾತಂತ್ರ್ಯ ಹೋರಾಟಕ್ಕಿಂತ ಮೊದಲೇ ಜರುಗಿತು ಎನ್ನುವುದು ಗಮನಾರ್ಹವಾದದು. ಬ್ರಿಟಿಷರು ಮತ್ತಷ್ಟು ಪ್ರಬಲರಾಗಿ ಕೊಡಗನ್ನು ಸ್ವಾತಂತ್ರ್ಯ ನೀಡುವವರೆಗೂ ಆಳಿದರು.

KTBS Not to be republished

ಪಂದ್ಯಂಡ ಬೆಳ್ಳಿಯಪ್ಪ, ಚೆಪ್ಪುಡಿರ, ಪೂಣಚ್ಚ ಮೊದಲಾದವರು ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಮತ್ತು ಮಹಾತ್ಮ ಗಾಂಧೀಜಿಯವರಿಂದ ಪ್ರಭಾವಿತರಾಗಿ ಬ್ರಿಟಿಷರ ವಿರುದ್ಧ ಸತ್ಯಾಗ್ರಹ ಕೈಗೊಳ್ಳುತ್ತಾರೆ. ಇವರನ್ನು ಬ್ರಿಟಿಷರು ಬಂಧಿಸಿದರೂ ಎದೆಗುಂದುವುದಿಲ್ಲ. ಸ್ವಾತಂತ್ರ್ಯ ಹೋರಾಟಕ್ಕಾಗಿ ರೈತರನ್ನು ಜನಸಾಮಾನ್ಯರನ್ನು ಒಗ್ಗೂಡಿಸಿ ನಡೆದ ಈ ಸತ್ಯಾಗ್ರಹ ಹೋರಾಟವು ಅವಿಸ್ಮರಣೀಯವಾಗಿದೆ.

## ಅಭ್ಯಾಸಗಳು

**I. ಕೆಳಗಿನ ವಾಕ್ಯಗಳಲ್ಲಿ ಖಾಲಿ ಬಿಟ್ಟ ಸ್ಥಳಗಳನ್ನು ಸೂಕ್ತ ಪದಗಳಿಂದ ತುಂಬಿರಿ.**

1. ಮೊದಲನೆ ಆಂಗ್ಲೋ–ಮೈಸೂರು ಯುದ್ಧ __________ ಒಪ್ಪಂದೊಂದಿಗೆ ಮುಕ್ತಾಯವಾಯಿತು.
2. ಫ್ರೆಂಚರ ವಸಾಹತು __________ .
3. ಹೈದರಾಲಿಯ ಮಗ __________ .
4. ಎಂಟು ಶತಮಾನಗಳ ಕಾಲ ಕೊಡಗನ್ನು ಆಳಿದವರು __________ .
5. 17ನೆಯ ಶತಮಾನದ ಪ್ರಾರಂಭದಲ್ಲಿ ದಕ್ಷಿಣ ಕನ್ನಡವನ್ನು __________ ನು ವಶಪಡಿಸಿಕೊಂಡನು.

**II. ಕೆಳಗಿನ ಪ್ರಶ್ನೆಗಳಿಗೆ ಗುಂಪುಗಳಲ್ಲಿ ಚರ್ಚಿಸಿ ಉತ್ತರಿಸಿ :**

1. ಹೈದರಾಲಿಯು ಬ್ರಿಟಿಷರ ವಿರುದ್ಧ ಹೇಗೆ ಹೋರಾಡಿದನು ?
2. ಎರಡನೇ ಮೈಸೂರು ಯುದ್ಧಕ್ಕೆ ಕಾರಣವೇನು ?
3. ಶ್ರೀರಂಗಪಟ್ಟಣ ಒಪ್ಪಂದವು ಟಿಪ್ಪುವಿಗೆ ಅನಿವಾರ್ಯವಾಗಿತ್ತು. ವಿಮರ್ಶಿಸಿ.
4. ಹೈದರಾಬಾದ್ ಕರ್ನಾಟಕದ ಪ್ರದೇಶಗಳಾವುವು ?
5. ಬ್ರಿಟಿಷರು ಮತ್ತು ಇಕ್ಕೇರಿಯ ವೆಂಕಟಪ್ಪ ನಾಯಕರ ಬಾಂಧವ್ಯವನ್ನು ವಿವರಿಸಿ.
6. ಕೊಡಗಿನ ದಂಗೆಯಲ್ಲಿ ಗುಡ್ಡೇಮನೆ ಅಪ್ಪಯ್ಯಗೌಡರ ಪಾತ್ರವನ್ನು ವಿವರಿಸಿ.
7. ಮುಂಬೈ–ಕರ್ನಾಟಕವು ಹೇಗೆ ಬ್ರಿಟಿಷರ ವಶವಾಯಿತು? ವಿಶ್ಲೇಷಿಸಿ.

**III. ಚಟುವಟಿಕೆಗಳು**

1. ಮೈಸೂರು ಪ್ರಾಂತ್ಯದಲ್ಲಿ ಟಿಪ್ಪು ಸುಲ್ತಾನನು ಕಟ್ಟಿಸಿರುವ ದೇವಾಲಯಗಳ ಚಿತ್ರಗಳನ್ನು ಸಂಗ್ರಹಿಸಿ ಆಲ್ಬಂ ತಯಾರಿಸಿ.

**IV. ಯೋಜನೆ**

1. ಹೈದರಾಬಾದ್ – ಕರ್ನಾಟಕ ಭಾಗಕ್ಕೆ ಇತ್ತೀಚೆಗೆ ನೀಡಿರುವ ವಿಶೇಷ ಸ್ಥಾನಮಾನದ ಬಗ್ಗೆ ಮಾಹಿತಿ ಸಂಗ್ರಹಿಸಿ ವರದಿ ಸಿದ್ಧಪಡಿಸಿ.

KTBS Not to be republished